# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 593 (677) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಮಂಡಳಿಯನ್ನಾಗಿ ರಚಿಸಿದ್ದು, 3 ಜಿಲ್ಲೆಗಳ ವ್ಯಾಪ್ತಿಗೆ ಆಯ-ವ್ಯಯದಲ್ಲಿ ನೀಡಲಾದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನ ಎಷ್ಟು;(ವಿವರ ನೀಡುವುದು)</td><td>2025-26ನೇ ಸಾಲಿನ ಆಯವ್ಯಯದಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಗೆ ನಿಗಧಿಯಾದ ಅನುದಾನ ಹಾಗೂ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿವೆ;<br>(ರೂ.ಲಕ್ಷಗಳಲ್ಲಿ)
<table>
<tr><th>ಉಪಶೀರ್ಷಿಕೆ</th><th>ಹಂಚಿಕೆ ಮಾಡಲಾದ ಅನುದಾನ</th><th>ಬಿಡುಗಡೆ ಮಾಡಲಾದ ಅನುದಾನ*</th></tr>
<tr><td colspan="3">ಅ) ಲೆಕ್ಕ ಶೀರ್ಷಿಕೆ 2217-80-001-1-06</td></tr>
<tr><td>ಆಡಳಿತ ವೆಚ್ಚ</td><td>202.95</td><td>189.45</td></tr>
<tr><td>ಒಟ್ಟು</td><td>202.95</td><td>189.45</td></tr>
<tr><td colspan="3">ಆ) ಲೆಕ್ಕಶೀರ್ಷಿಕೆ – 4217-60-051-0-03</td></tr>
<tr><td>ಬಂಡವಾಳ ವೆಚ್ಚ (132)</td><td>796.95</td><td>199.2375</td></tr>
<tr><td>ಪರಿಶಿಷ್ಟ ಜಾತಿ ಉಪಯೋಜನ (422)</td><td>180.08</td><td>135.0600</td></tr>
<tr><td>ಗಿರಿಜನ ಉಪಯೋಜನೆ (423)</td><td>72.97</td><td>54.7275</td></tr>
<tr><td>ಒಟ್ಟು</td><td>1050.00</td><td>389.025</td></tr>
<tr><td>ಒಟ್ಟು(ಅ+ಆ)</td><td>1252.95</td><td>578.475</td></tr>
</table>
*ನವೆಂಬರ್ 2025 ರ ಅಂತ್ಯದವರೆಗೆ</td></tr>
<tr><td>(ಆ)</td><td>ಕರಾವಳಿಯ ಅಭಿವೃದ್ಧಿ ಮಂಡಳಿಯ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ; ಈ ಬಗ್ಗೆ ಮಂಡಳಿಯ ಕೆಲಸ ಕಾರ್ಯಗಳ ಬಗ್ಗೆ ವ್ಯಾಪ್ತಿಯನ್ನು ನಿಗದಿಗೊಳಿಸಲಾಗಿದೆಯೇ; (ವಿವರ ನೀಡುವುದು);</td><td>ಕರಾವಳಿ ಅಭಿವೃದ್ಧಿ ಮಂಡಳಿಯು ಕೈಗೊಳ್ಳುವ ಕಾರ್ಯಗಳ ಬಗ್ಗೆ ಮಂಡಳಿ ಅಧಿನಿಯಮ, 2023 ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2023, ದಿನಾಂಕ:10.06.2024 ರಂತೆ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ<br><br>1. ಕರಾವಳಿ ಪ್ರದೇಶದಲ್ಲಿನ ಜಲ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸುವುದು;<br>2. ಕರಾವಳಿ ಪ್ರದೇಶದಲ್ಲಿರುವ ಮಳೆ ಆಶ್ರಿತ ಕೃಷಿ ಪದ್ಧತಿಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು;<br>3. ಕರಾವಳಿ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿಪಡಿಸುವುದು;<br>4. ಕರಾವಳಿ ಪ್ರದೇಶದಲ್ಲಿ ತೋಟಗಾರಿಕೆಯ ಅಭಿವೃದ್ಧಿಯನ್ನು ಉತ್ತೇಜಿಸುವುದು;<br>5. ಕರಾವಳಿ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಚಟುವಟಿಕೆಗಳನ್ನು ಬೆಂಬಲಿಸುವುದು ಮತ್ತು ಉತ್ತೇಜಿಸುವುದು;<br>6. ಕರಾವಳಿ ಪ್ರದೇಶದಲ್ಲಿ ಪಶುಸಂಗೋಪನೆ, ಮೀನುಗಾರಿಕೆ, ಒಳನಾಡು ಜಲಸಾರಿಗೆ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವುದು; ಮತ್ತು<br>7. ಸರ್ಕಾರವು ನಿರ್ದೇಶಿಸುವಂಥ ಇತರ ಉದ್ದೇಶಗಳು</td></tr>
<tr><td>(ಇ)</td><td>ಕರಾವಳಿ ಅಭಿವೃದ್ಧಿಯ ಜೊತೆಗೆ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಲು ಯೋಜನೆಗಳನ್ನು ಮಂಡಳಿಯ ಮೂಲಕ ಅಭಿವೃದ್ಧಿಗೆ ಪೂರಕವಾಗುವ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು;</td><td>ಪ್ರವಾಸೋದ್ಯಮ ಇಲಾಖೆಯು ಮಂಡಳಿಯ ಮೂಲಕ ಯೋಜನೆಗಳನ್ನು ಕೈಗೊಳ್ಳಬಹುದಾಗಿರುತ್ತದೆ. ಅನುದಾನವನ್ನು ನಿಗಧಿಪಡಿಸಿ ಯೋಜನೆಗಳನ್ನು ಜಾರಿ ಮಾಡುವ ಕಾರ್ಯವು ಸಂಬಂಧಪಟ್ಟ ಇಲಾಖೆಯದ್ದಾಗಿರುತ್ತದೆ.</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಈ) | ಕರಾವಳಿ ಅಭಿವೃದ್ಧಿ ಮಂಡಳಿಗೆ ಸ್ವಂತ ಕಟ್ಟಡವನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; | ಹೌದು.<br><br>ಸ್ವಂತ ಕಟ್ಟಡ ನಿರ್ಮಾಣ ಮಾಡಲು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (MUDA) ದಿಂದ ನಿವೇಶನ ಪಡೆಯಲು ಸೂಚಿಸಲಾಗಿದೆ. |
| (ಉ) | ಕರಾವಳಿ ಅಭಿವೃದ್ಧಿ ಮಂಡಳಿಗೆ ಮಂಜೂರಾದ ಖಾಯಂ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು;(ವಿವರ ನೀಡುವುದು); | ಕರಾವಳಿ ಅಭಿವೃದ್ಧಿ ಮಂಡಳಿಗೆ ನಿಯೋಜನೆ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದ್ದು, ಮಂಜೂರಾದ ಹುದ್ದೆಗಳ ವಿವರಗಳು ಹಾಗೂ ಭರ್ತಿಯಾದ ಹುದ್ದೆಗಳು ಮತ್ತು ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ವಿವರಗಳು ಈ ಕೆಳಕಂಡಂತಿವೆ; |

| ಕ್ರ. ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ನಿಯೋಜನೆ/ ಹೊರಗುತ್ತಿಗೆ |
|---|---|---|---|
| 1 | ಕಾರ್ಯದರ್ಶಿ(ಕೆ.ಎ.ಎಸ್., ಹಿರಿಯ ಶ್ರೇಣಿ) | 1 | 1 |
| 2 | ಆಪ್ತ ಕಾರ್ಯದರ್ಶಿ | 1 | 1 |
| 3 | ಕಛೇರಿ ವ್ಯವಸ್ಥಾಪಕರು (ಗ್ರೂಪ್ ಬಿ) | 1 | 1 |
| 4 | ಲೆಕ್ಕಪರಿಶೋಧಕರು | 1 | 1 |
| 5 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಹಿರಿಯ ಜೂನಿಯರ್ ಇಂಜಿನಿಯರ್ | 1 | 1 |
| 6 | ಕಾರ್ಯಕಾರಿ ಸಹಾಯಕ/ ಪ್ರಥಮ ದರ್ಜೆ ಸಹಾಯಕ | 1 | 1 |
| 7 | ಶೀಘ್ರಲಿಪಿಗಾರರು | 1 | 1 |
| 8 | ಡಾಟಾ ಎಂಟ್ರಿ / ಕಂಪ್ಯೂಟರ್ ಆಪರೇಟರ್ | 1 | 1 |
| 9 | ಗ್ರೂಪ್ ಸಿ | 2 | 2 |
| 10 | ಗ್ರೂಪ್ ಡಿ | 3 | 3 |
| 11 | ಚಾಲಕ | 1 | 1 |
| | **ಒಟ್ಟು** | **14** | **14** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಊ) | ಕರಾವಳಿ ಅಭಿವೃದ್ಧಿ ಮಂಡಳಿಯು ಪ್ರಸ್ತುತ ಆರ್ಥಿಕ ಹಾಗೂ ಸಿಬ್ಬಂದಿ ಕೊರತೆಯಿಂದ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;ಬಂದಿದ್ದಲ್ಲಿ ಸಿಬ್ಬಂದಿ ಭರ್ತಿ ಮಾಡಿ, ಆರ್ಥಿಕ ಸಹಾಯ ಮಾಡಲು ಕ್ರಮಕೈಗೊಳ್ಳುವುದೇ? | -ಇಲ್ಲ-<br><br>2026-27ನೇ ಸಾಲಿನಲ್ಲಿ ಹೆಚ್ಚು ಅನುದಾನವನ್ನು ಪ್ರಸ್ತಾಪಿಸಲಾಗುವುದು. ಮಂಜೂರಾದ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತದೆ. |

**ಸಂಖ್ಯೆ: ಪಿಡಿಎಸ್/5/ಕೆಡಿಬಿ/2025**

**(ಡಿ.ಸುಧಾಕರ್)**